ಮಾಡಿದರು.

◆ **ಈ ಕಲಾಸಾಧನೆಯನ್ನು ಒಂದು ಬಗೆಯ ದೈವಿಕತೆಯೊಂದಿಗೆ ನೀವು ಸ್ವೀಕರಿಸಿದ್ದೀರಿ ಎಂದಾಯಿತು.**

ದೈವಿಕತೆ ಎನ್ನುವುದಕ್ಕಿಂತ ಇದು ಆಧ್ಯಾತ್ಮಿಕ ಸಾಧನೆಗೆ ಪೂರಕ ಎಂದು ನಾನು ತಿಳಿದಿರುವೆ. ನಮ್ಮ ಪೂರ್ವಿಕರನ್ನು ಗಮನಿಸಿ ನೋಡಿದರೆ, ಯಾರೆಲ್ಲ ಅಧ್ಯಾತ್ಮ ಸಾಧನೆಯ ಹಾದಿ ಹಿಡಿದಿದ್ದಾರೋ ಅವರೆಲ್ಲರೂ ನೃತ್ಯದ ಮೊರೆ ಹೋಗಿದ್ದಾರೆ. ಭಕ್ತಿಪಂಥದ ಮಹಾನ್ ಪ್ರತಿಪಾದಕ ಚೈತನ್ಯ ಮಹಾಪ್ರಭು, ಮೀರಾಬಾಯಿ, ರೂಮಿ, ರಾಮಕೃಷ್ಣ ಪರಮಹಂಸ... ಹೀಗೆ ಅನೇಕರು ಸಾಧನೆಯ ಉತ್ತುಂಗದಲ್ಲಿ ಆನಂದದ ಅಭಿವ್ಯಕ್ತಿಗಾಗಿ ನೃತ್ಯಕ್ಕೇ ಶರಣಾಗಿದ್ದಾರೆ. ಆದ್ದರಿಂದ ಅಧ್ಯಾತ್ಮ ಅಥವಾ ಪರಮ ಆನಂದವನ್ನು ಅನುಭವಿಸುವುದಕ್ಕೆ ನೃತ್ಯವು ಒಂದು ಮಾಧ್ಯಮವಾಗಿದೆ. ನಾನು ನನ್ನನ್ನು ಅರ್ಥಮಾಡಿಕೊಳ್ಳಲು– ದೇಹ, ಮನಸ್ಸು ಮತ್ತು ಆತ್ಮದ ಸಮತೋಲನವನ್ನು ಅರ್ಥ ಮಾಡಿಕೊಳ್ಳಲು– ನೃತ್ಯವನ್ನು ಆಯ್ಕೆ ಮಾಡಿಕೊಂಡಿದ್ದೇನೆ.

ಇದರ ಇನ್ನೊಂದು ಆಯಾಮವನ್ನು ನಾನು ವಿವರಿಸಬೇಕು. ನೃತ್ಯವು ಒಂದು ಧ್ಯಾನಸ್ಥ ಸ್ಥಿತಿಯಾಗಿದೆ. ನೃತ್ಯದ ಒಂದು ಚಲನೆಯು ಕೇವಲ ದೇಹದ ಚಲನೆಯಷ್ಟೇ ಆಗಿರುವುದಿಲ್ಲ. ಆ ಚಲನೆಗೆ ಭಾವನೆಗಳ ಇಂಧನವು ದೊರೆಯಬೇಕು. ಅದು ಮನಸ್ಸಿನ ಧಾಟಿಯೊಂದಿಗೆ ಹೊಂದಿಕೆ ಆಗಬೇಕು. ದೇಹ, ಮನಸ್ಸು, ಭಾವಶುದ್ಧಿಯೊಂದಿಗೆ ಭಂಗಿಯೊಂದನ್ನು ಅನುಸಂಧಾನ ಮಾಡಿಕೊಳ್ಳುವುದೆಂದರೆ ಅದೊಂದು ಧ್ಯಾನಸ್ಥ ಸ್ಥಿತಿ. ನೀವು ಧ್ಯಾನದ ಸ್ಥಿತಿಯಲ್ಲಿದ್ದೀರಿ ಎಂದರೆ 'ಹುಡುಕಾಟ'ದ ಹಾದಿಗೆ ಬಿದ್ದಿದ್ದೀರಿ ಎಂದೇ ಅರ್ಥ.

◆ **ನಿಮ್ಮ ಪ್ರಕಾರ ಸಾಧನೆಯೆಂದರೆ ಏನು ?**

ನಾನು ಮನೆಯಲ್ಲಿ, ನೃತ್ಯ ತರಗತಿಯಲ್ಲಿ ಅಥವಾ ಎಲ್ಲೇ ಇದ್ದರೂ ಸದಾ ಕುಣಿಯುತ್ತಲೇ ಇರುತ್ತಿದ್ದೆ. ನನ್ನ ನೃತ್ಯಗುರುಗಳು ಹೇಳುತ್ತಿದ್ದರು, 'ಅವಳಿಗೆ ಭರತನಾಟ್ಯದ ಭೂತ ಮೆಟ್ಟಿದೆ' ಎಂದು. ತಮಿಳಿನಲ್ಲಿ, 'ಕುಟ್ಟಿಚಾತನ್ ಪಿಡಿಚಿರ್ಕ್‌ದ್...' ಎಂದು ಹೇಳುತ್ತ ನಗುತ್ತಿದ್ದರು. ಅದು ನಿಜ ಕೂಡ. ಕಲೆಯ ಹುಚ್ಚು ಎಂದರೆ ಅದು ನಮ್ಮನ್ನು ಅಟಕಾಯಿಸುವ ದೆವ್ವ, ಅದು ನಮ್ಮನ್ನು ಬಿಡುವುದೇ ಇಲ್ಲ. ಆದರೆ ನಾವು ಸಾಧನೆಯ ಮೂಲಕ ಮುಂದೆ ಸಾಗುತ್ತ , ನಮ್ಮೊಳಗಿನ ದೇವತೆಯನ್ನು ಯಾವಾಗ ಅನಾವರಣಗೊಳಿಸುತ್ತಾ ಸಾಗುತ್ತೇವೆಯೋ, ಆಗ ನಾವು ಸಾಧನೆಯ ಹಾದಿಯಲ್ಲಿ ಮುಂದುವರೆಯುತ್ತಿದ್ದೇವೆ ಎಂದರ್ಥ.

◆ **ಹೊಸ ನೃತ್ಯ ಪರಿಕಲ್ಪನೆಗಳನ್ನು ಹೆಣೆಯುವುದರಲ್ಲಿ ನೀವು ನಿಸ್ಸೀಮರು ಎಂಬುದು ಕಲಾವಿಮರ್ಶಕರ ಅನಿಸಿಕೆ. ನೀವು ಕೈಗೆತ್ತಿಕೊಂಡು ಕೊರಿಯೊಗ್ರಫಿ ಮಾಡಿರುವ ಪರಿಕಲ್ಪನೆಗಳೂ ಅಪರೂಪದವು. ಉದಾಹರಣೆಗೆ, ಮುಕುಂದ ಮಾಲಾ, ಶಬರಿ, ಹಕ್ಕಿಗಳ ಕೂಜನ, ಶಿವೋಹಂ... ಹೊಸ ಪರಿಕಲ್ಪನೆಗಳನ್ನು ಹುಡುಕುವ ಕೌಶಲ ನಿಮಗೆ ಒಲಿದಿದೆಯೆನಿಸುತ್ತದೆ.**

ಭಾರತೀಯ ಜ್ಞಾನ ಪರಂಪರೆಯಲ್ಲಿ ಹೊಸದನ್ನು ಹುಡುಕಬೇಕಾದರೆ ಹಳೆಯದನ್ನು ಅಗೆಯಬೇಕು. ಅಂದರೆ, ನಮ್ಮ ಓದು ಯಾವಾಗ ಶ್ರೀಮಂತವಾಗಿರುತ್ತದೋ ಆಗ ಹೊಸ ಹೊಳಹುಗಳು ತಾನಾಗಿಯೇ ಒದಗಿಬರುತ್ತವೆ. ನಮ್ಮಲ್ಲಿರುವ ಜ್ಞಾನ ಪರಂಪರೆಗೆ ಶರಣಾಗಿ ಅತಿಶಯವಾದ ಶ್ರದ್ಧೆಯಿಂದ ಯಾವಾಗ ನಾವು ಓದಲು ಆರಂಭಿಸುತ್ತೇವೋ, ಪೂರ್ವಿಕರ ಸಾಧನೆಯನ್ನು ಅರಿಯಲು ಸಿದ್ಧರಾಗಿರುತ್ತೇವೆಯೋ, ಆಗ ನಾವು ನಮಗೆ ಅರಿವಿಲ್ಲದೆಯೇ ಮುಂದಕ್ಕೆ ಚಲಿಸುತ್ತಿರುತ್ತೇವೆ. ಇದು ನನ್ನ ಅಮ್ಮ ನನಗೆ ದಯಪಾಲಿಸಿದ ಜ್ಞಾನಭಿಕ್ಷೆಯಾಗಿದೆ. ಆಕೆ ಪ್ರವಚನಕ್ಕಾಗಿ ಪುರಾಣಗಳನ್ನು, ಉಪನಿಷತ್ತುಗಳನ್ನು ಬಹಳಷ್ಟು ಓದುತ್ತಿದ್ದಳು. ಆಗೆಲ್ಲ ನಾನೂ ಆ ಕೃತಿಗಳನ್ನು ಇಣುಕಿ ನೋಡುತ್ತಿದ್ದೆ. ಆಕೆಯ ಪ್ರವಚನದಲ್ಲಿ ನಾನೂ ಕುಳಿತಿರುತ್ತಿದ್ದೆ. ಬೋನಸ್ ಎಂಬಂತೆ ಬಾಲ್ಯದಲ್ಲಿ ನಾನು ಸಂಸ್ಕೃತವನ್ನು ಕಲಿತಿದ್ದರಿಂದ, ಅಮ್ಮ ಓದಿದ ಪುಸ್ತಕಗಳನ್ನು ನಾನೂ ಓದುವುದು ಕಷ್ಟವಾಗಲಿಲ್ಲ. ನಾನು ಓದುತ್ತಾ ಹೋಗುವಾಗ ನನ್ನ ಕಣ್ಣಮುಂದೆ ಬರುವ ಚಿತ್ರಣಗಳು ಅದನ್ನು ನೃತ್ಯವಾಗಿ ಸುಂದರವಾಗಿ ಪರಿವರ್ತಿಸಬಹುದು ಎಂದು ಅನಿಸುತ್ತದೆಯೋ ಆಗ ನಾನು ಆ ಶ್ಲೋಕಗಳನ್ನು ನೃತ್ಯರೂಪಕ್ಕೆ ತರಲು ಯತ್ನಿಸಿದ್ದೆ. ಉದಾಹರಣೆಗೆ,